# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

...ಖ್ಯೆ: ಬಿ12(6)ಪಿಆರ್/ಇ-19393/22-23

ಮುಖ್ಯ ಆಯುಕ್ತರವರ ಕಛೇರಿ
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 05.05.22

## ಕಛೇರಿ ಆದೇಶ

ವಿಷಯ: ಕಾರ್ಯಪಾಲಕ ಅಭಿಯಂತರರನ್ನು ಪಾಲಿಕೆಯಲ್ಲಿ ಮುಂದುವರೆಸುವ ಬಗ್ಗೆ.

ಉಲ್ಲೇಖ:
1) ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ನಅಇ 375 ಎಂಎನ್.ಯು 2020, ದಿನಾಂಕ: 04-12-2020
2) ಸಂಖ್ಯೆ: ಸಂಖ್ಯೆ: ಬಿ12(6)ಪಿಆರ್/310/20-21 ದಿನಾಂಕ: 04-02-2021
3) ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ವಲಯ ರವರು ಕರ್ತವ್ಯದಿಂದ ಬಿಡುಗಡೆಗೊಳಿಸಿರುವ ದಿನಾಂಕ: 07-03-2022
4) ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ನಅಇ 148 ಎಂಎನ್.ಯು 2022, ದಿನಾಂಕ: 08-04-2022
5) ಶ್ರೀ ವೈ. ಎನ್. ಶೇಷಾದ್ರಿ, ಕಾ.ಪಾ.ಅ ರವರ ಮನವಿ ದಿನಾಂಕ: 11-04-2022

--------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ವೈ. ಎನ್. ಶೇಷಾದ್ರಿ, ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ರೂರಲ್ ಇನ್ಫ್ರಾಸ್ಟ್ರಕ್ಚರ್ ಡೆವಲಪ್ಮೆಂಟ್ ಲಿಮಿಟೆಡ್ ಸಂಸ್ಥೆಯಿಂದ ಎರವಲು ಸೇವೆಯ ಮೇಲೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಇವರನ್ನು ಉಲ್ಲೇಖ-(1)ರ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಆದೇಶದಲ್ಲಿ ಮಾತೃ ಇಲಾಖೆಗೆ ಹಿಂದಿರುಗಿಸಲಾದಂತೆ ಸದರಿಯವರನ್ನು ಉಲ್ಲೇಖ-(2) ಮತ್ತು (3)ರ ರೀತ್ಯಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸೇವೆಯಿಂದ ಬಿಡುಗಡೆಗೊಳಿಸಲಾಗಿರುತ್ತದೆ. ತದನಂತರ ಉಲ್ಲೇಖ-(4)ರ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆಯಲ್ಲಿ ಉಲ್ಲೇಖ-(1)ರ ಆದೇಶವನ್ನು ಮಾರ್ಪಡಿಸಿ, ಸದರಿಯವರನ್ನು ವಯೋನಿವೃತ್ತಿ ಹೊಂದುವವರೆಗೆ (ದಿನಾಂಕ: 31-10-2022) ಅಥವಾ ಮುಂದಿನ ಆದೇಶದವರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮುಂದುವರೆಸಿ ಆದೇಶಿಸಿದ್ದು, ಈ ಸಂಬಂಧ ಸದರಿ ಅಭಿಯಂತರರು ಉಲ್ಲೇಖ-(5)ರಂತೆ ಪಾಲಿಕೆಯಲ್ಲಿ ಹಾಜರಾತಿ ಸಲ್ಲಿಸಿರುವುದನ್ನು ಪರಿಗಣಿಸಿ, ಉಲ್ಲೇಖ-(3) ಮತ್ತು (4)ರಂತೆ ಪಾಲಿಕೆಯ ಸೇವೆಯಿಂದ ಬಿಡುಗಡೆಗೊಳಿಸಿರುವ ಆದೇಶವನ್ನು ಹಿಂಪಡೆದು, ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಕಾರ್ಯಪಾಲಕ ಅಭಿಯಂತರರು (ಬೊಮ್ಮನಹಳ್ಳಿ) ವಿಭಾಗದಲ್ಲಿ ಕಾರ್ಯನಿರ್ವಹಿಸಲು ಮುಂದುವರೆಸಿ ಆದೇಶಿಸಿದೆ.

ಮೇಲ್ಕಂಡ ಆದೇಶದಂತೆ ಸದರಿ ಅಭಿಯಂತರರು ಮುಂದುವರೆಸಿ, ನೇಮಿಸಿರುವ ಸ್ಥಳದಲ್ಲಿ ಹಾಜರಾತಿ ಸಲ್ಲಿಸಿ, ಸಿ.ಟಿ.ಸಿ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

5/5/22

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮಾನ್ಯ ಮುಖ್ಯ ಆಯುಕ್ತರು ರವರ
ಆದೇಶದ ಮೇರೆಗೆ)

5/5/22

**ಪ್ರತಿಯನ್ನು:-**
: ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
: ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
: ಸರ್ಕಾರದ ಅಧೀನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ, ವಿಕಾಸ ಸೌಧ, ಬೆಂಗಳೂರು ರವರಿಗೆ ಕಳುಹಿಸಿದೆ.
: ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
: ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ವಲಯ ರವರಿಗೆ ಕಳುಹಿಸಿದೆ.
: ಪ್ರಧಾನ ಅಭಿಯಂತರರು / ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ) ವಲಯ ರವರಿಗೆ ಕಳುಹಿಸಿದೆ.
: ಕಾರ್ಯಪಾಲಕ ಅಭಿಯಂತರರು (ಬೊಮ್ಮನಹಳ್ಳಿ) ವಿಭಾಗ ರವರಿಗೆ ಕಳುಹಿಸಿದೆ.
: ಮಾಹಿತಿ ತಂತ್ರಜ್ಞಾನ ಸಲಹೆಗಾರರುರವರಿಗೆ ಕಳುಹಿಸಿದೆ.
: ಮು.ಲೆ.ಅ / ಮು.ಲೆ.ಪ ರವರಿಗೆ / ಉಪ ನಿಯಂತ್ರಕರು (ಹಣಕಾಸು-ಬೊಮ್ಮನಹಳ್ಳಿ) ರವರಿಗೆ ಕಳುಹಿಸಿದೆ.
: ಸಂಬಂಧಪಟ್ಟ ಅಭಿಯಂತರರಿಗೆ / ಕಛೇರಿ ಪ್ರತಿ.

Office of the IT Advisor
Bruhat Bangalore Mahanagara Palike
No. 86/22-23
Date 13/05/2022

CO1
13/05